Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 877/2023

ಸಿ ಡಬ್ಲ್ಯೂ-4
ಪಿ ಡಬ್ಲ್ಯೂ-2

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ವಿಜಯಕುಮಾರ |
| ತಂದೆಯ ಹೆಸರು | ಃ- | ಪಾಂಡಪ್ಪ |
| ವಯಸ್ಸು | ಃ- | 27 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಹಾಲಭಾವಿ ತಾಂಡ |

**ದಿ.12-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ನನ್ನ ತಾಯಿ. ಚಾ.ಸಾ-2 ಮತ್ತು 3 ನಮ್ಮೂರಿನವರು ಪರಿಚಯ ಇದೆ. ಚಾ.ಸಾ-5 ನನ್ನ ತಮ್ಮ. ಚಾ.ಸಾ-6 ನನ್ನ ತಂದೆ. ಚಾ.ಸಾ-7 ನನ್ನ ಚಿಕ್ಕಪ್ಪ. 1 ಮತ್ತು 2ನೇ ಆರೋಪಿತರು ನನ್ನ ಮಾವಂದಿರು. 3ನೇ ಆರೋಪಿ ನನ್ನ ಮಾವ. 4 ಮತ್ತು 5ನೇ ಆರೋಪಿತರು ನನ್ನ ಅತ್ತೆಯರು. 6ನೇ ಆರೋಪಿ ನನ್ನ ತಂಗಿ.

ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 9-00 ಗಂಟೆಗೆ ನಮ್ಮ ಮನೆಯ ಮುಂದೆ ನಾನು ಮತ್ತು ಚಾ.ಸಾ-1 ಮತ್ತು 5 ರವರು ಇದ್ದಾಗ ಎಲ್ಲಾ ಆರೋಪಿತರು ಬಂದು ಬರಲೇ ಸೂಳೆ ಮಕ್ಕಳೆ ಮನೆಯಲ್ಲಿ ಏಕೆ ಕುಳಿತಿದ್ದೀರಿ ಹೊರಗೆ ಬಾ ಎಂದು ಬೈದರು. ಆಗ ನಾವು ಹೊರಗೆ ಬಂದಾಗ 1 ಮತ್ತು 5ನೇ ಆರೋಪಿತರು ನಮಗೆ ಉಗುಳಿರುತ್ತಾರೆ. ಆರೋಪಿತರು ನಮಗೆ ಹೊಲದಲ್ಲಿ ಪಾಲು ಕೇಳಿ ಬೈದಾಡಿರುತ್ತಾರೆ. ನಾವು ಪಾಲು ಕೊಡುತ್ತೇವೆ ಎಂದು ಹೇಳಿದರೂ ಸಹ 1 ಮತ್ತು 2ನೇ ಆರೋಪಿತರು ಬಂದು ಚಾ.ಸಾ-1 ರವರ ಸೀರೆ ಹಿಡಿದು ಎಳೆದಾಡಿ ಹರಿದಿರುತ್ತಾರೆ. ಕುಪ್ಪಸವನ್ನು ಸಹ ಹರಿದಿರುತ್ತಾರೆ. ನಂತರ ನಾನು ಮತ್ತು ಚಾ.ಸಾ-5 ರವರು ಬಿಡಿಸಲು ಹೋದಾಗ 3ನೇ ಆರೋಪಿತನು ನನಗೆ ಕಾಲಿನಿಂದ ಒದ್ದಿರುತ್ತಾನೆ. ವೆಂಕಟೇಶನು ಚಾ.ಸಾ-5 ರವರಿಗೆ ಕಾಲಿನಿಂದ ಒದ್ದು ಒಳಪೆಟ್ಟು ಮಾಡಿರುತ್ತಾನೆ. ನಂತರ ಚಾ.ಸಾ-6 ಮತ್ತು 7 ರವರು ಬಿಡಿಸಿರುತ್ತಾರೆ. ನಂತರ ನಾವು ಆಸ್ಪತ್ರೆಗೆ ಹೋಗಿ ನಾನು ಮತ್ತು ಚಾ.ಸಾ-5 ರವರು ದಾಖಲಾಗಿರುತ್ತೇವೆ. ನಂತರ ಚಾ.ಸಾ-1 ರವರು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

**<u>ಪಾಟೀ ಸವಾಲು ಶ್ರೀ ಹೆಚ್.ವೈ ವಕೀಲರಿಂದ : -</u>**

ಜಮೀನಿನ ಪಾಲಿನ ಸಂಬಂಧ ನಮಗೂ ಮತ್ತು ಆರೋಪಿತರ ನಡುವೆ ವೈ-ಮನಸ್ಸು ಇದೆ ಎಂದರೆ ಸರಿ. ಜಮೀನು ಸಂಬಂಧ ಮಾನ್ಯ ಹಿರಿಯರ ಸಿವಿಲ್ ನ್ಯಾಯಾಲಯದಲ್ಲಿ ದಾವೆ ನಡೆದಿದೆ ಎಂದರೆ ಸರಿ. ನನಗೆ ಗಣೇಶ, ವೆಂಕಟೇಶ ಮತ್ತು ತಿಪ್ಪಣ್ಣ ಹೊಡೆದಿರುತ್ತಾರೆ. ಮೂವರು ಕಾಲಿನಿಂದ ಒದ್ದು ಮೂವರು ಬಡಿಗೆ ತೆಗೆದುಕೊಂಡು ಹೊಡೆದಿರುತ್ತಾರೆ. ಅವರು ಬಡಿಗೆಯಿಂದ ಹೊಡೆದಾಗ ನನಗೆ ರಕ್ತಗಾಯ ಆಗಿರಲಿಲ್ಲ ಒಳಪೆಟ್ಟು ಆಗಿತ್ತು. ಬಲಗಡೆ ಬುಜಕ್ಕೆ ನನಗೆ ಒಳಪೆಟ್ಟಾಗಿತ್ತು. ಮೊಣಕಾಲಿಗೆ ಒಳಪೆಟ್ಟಾಗಿರುತ್ತದೆ. ಜಗಳವು ನಮ್ಮ ಮನೆಯ ಮುಂದುಗಡೆ ಆಗಿರುತ್ತದೆ. ನಮ್ಮ ತಮ್ಮನಿಗೆ ತಿಪ್ಪಣ್ಣ, ಗಣೇಶ ಮತ್ತು ವೆಂಕಟೇಶರವರು ಕಾಲಿನಿಂದ ಒದ್ದಿರುತ್ತಾರೆ. ಆತನಿಗೆ ಗಾಯಗಳಾಗಿರಲಿಲ್ಲ ಒಳಪೆಟ್ಟಾಗಿದ್ದವು. ಈ ಎಲ್ಲಾ ವಿಷಯಗಳನ್ನು ನನ್ನ ಹೇಳಿಕೆಯಲ್ಲಿ ಬರೆಸಿರುತ್ತೇನೆ. ನನ್ನ ಹೇಳಿಕೆಯನ್ನು ಪೋಲಿಸರು ಠಾಣೆಯಲ್ಲಿ ಪಡೆದಿರುತ್ತಾರೆ. ಹೇಳಿಕೆಯನ್ನು ಜಗಳವಾದ ಮರುದಿನ ಪಡೆದಿರುತ್ತಾರೆ. ಜಗಳವಾದಾಗ ನಾನು, ನನ್ನ ತಾಯಿ ಮತ್ತು ತಮ್ಮ ಇದ್ದೆವು. ನಮ್ಮ ಮೂವರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಆರೋಪಿತರು ಬಂದು ನನಗೆ ಮತ್ತು ನಮ್ಮ ತಾಯಿ ಮತ್ತು ತಮ್ಮನಿಗೆ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಬಂದು ನಮಗೆ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಯಾವುದೇ ಗಾಯ ಆಗಿಲ್ಲ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮತ್ತು ನಮ್ಮ ನಡುವೆ ಹೊಲದ ವೈಷಮ್ಯ ಇರುವದರಿಂದ ಅವರ ವಿರುದ್ದ ಸುಳ್ಳು ಕೇಸು ಹಾಕಿರುತ್ತೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.